Doc-388
T-P-2

(1)

R No KRNN 12 26-10-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★★★★★
58 th Year
ನೇ ವರ್ಷ

# ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 3 ಪೈಸೆ

## ಅಮೇರಿಕಾದಿಂದ ಭಾರತಕ್ಕೆ ಆಹಾರ ಸರಬರಾಜು

### ಎಣ್ಣೆ ನಿಧಿ

ಜಕರ್ತಾ— ಅಂತರ ರಾಷ್ಟ್ರೀಯ ಹಣ ನಿಧಿಯವರು ಕೆಲವು ಎಣ್ಣೆ ಉತ್ಪಾದಿತ ದೇಶಗಳಿಂದ, ಎಣ್ಣೆ ಬೆಲೆ ಏರಿಕೆಯಿಂದ ಸಂಕಟಕ್ಕೀಡಾಗಿರುವ ದೇಶಗಳಿಗೆ ಪರಿಹಾರವಾಗಿ ಶೇಖರಿಸುತ್ತಿರುವ ಹಣವು ರೂ. 2559 ಕೋಟಿ ಆಗಿದೆ.

★

### ಮಹೇನಜಾಡಾರೋ ರಕ್ಷಣೆ

ಕರಾಚಿ— ಸಿಂಧೂ ಕಣಿವೆ. ನೀರಿನಲ್ಲಿ ಮುಳುಗಿಹೋಗದಿರುವಂತೆ 4500 ವರ್ಷಗಳ ಹಿಂದಿನ ನಾಗರೀಕತೆಯ ಮಹೆನಜಾಡಾರೋ ಪಟ್ಟಣದ ಅವಶೇಷ ರಕ್ಷಿಸಲು 14 ಮಿಲಿಯ ಡಾಲರು ಕಾರ್ಯಕ್ರಮವನ್ನು ಯುನೆಸ್ಕೊ ಮತ್ತು ಪಾಕಿಸ್ತಾನ ಸರಕಾರ ಮುಂದಿನ ವರ್ಷ ಪ್ರಾರಂಭಿಸಲಿವೆ.

★

### ನ್ಯೂಸ್‌ಪ್ರಿಂಟ್

ನವದೆಹಲಿ— 1974 ರ ಜನವರಿಯಿಂದ ಸೆಪ್ಟಂಬರ್ ವರೆಗೆ 9 ತಿಂಗಳಲ್ಲಿ ಈ ದೇಶಕ್ಕೆ 104000 ಟನ್ ನ್ಯೂಸ್‌ಪ್ರಿಂಟ್ ಬಂದಿದ್ದು, ಪತ್ರಿಕೆಗಳ ಕೋಟಾದಲ್ಲಿ ಖೋತಾ ವಾಗಿದ್ದನ್ನು ತೆಗೆದುಹಾಕುವಂತಿದೆ.

★

### ದೀಪದಕಡ್ಡಿ ಪೆಟ್ಟಿಗೆಗಳಿದ್ದ ವ್ಯಾಗನ್

ಹೈದರಾಬಾದು— ತಮಿಳುನಾಡುವಿನ ವಿದುರನಗರದಿಂದ ದೆಲ್ಲಿಗೆ ಕಳುಹಿಸಲಾಗಿದ್ದ ಒಂದು ವ್ಯಾಗನ್ ದೀಪದಕಡ್ಡಿ ಪೆಟ್ಟಿಗೆಗಳನ್ನು ಎಕ್ಸೈಜಿನವರು ವಶಪಡಿಸಿಕೊಂಡರು – ಇದಕ್ಕೆ ರಫ್ತು ಮಾಡಿದ ಕಂಪೆನಿ ಎಕ್ಸೈಜ್ ತೆರಿಗೆ ಕೊಟ್ಟಿರಲಿಲ್ಲ.

★

### ಆಹಾರ ಸರಬರಾಜು

ನ್ಯೂಯಾರ್ಕ್— ಭಾರತದಲ್ಲಿನ ಸ್ವಸ್ಥ ಆಹಾರ ಅಭಾವ ಎದುರಿಸಲು ಅಮೇರಿಕ 300000 ಟನ್ ಆಹಾರಧಾನ್ಯ ಕೊಡುವ ಸಂಭವವಿದೆ

### ಜನತಾ ಸಹಕಾರ

ಬೆಂಗಳೂರು— ಭೂ ಸುಧಾರಣೆ ಜಾರಿಗೆ ಜನರ ಸಹಕಾರ ಅವಶ್ಯಕವೆಂದು ಕಂದಾಯ ಮಂತ್ರಿ ಶ್ರೀ ಹೆಚ್ಚಮಾಸ್ತಿಗೌಡರು ತಾಲ್ಲೂಕು ಮಟ್ಟದ ವೈತ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

★

### ಕೇಸ್ ವಿರುದ್ಧ ಚಳವಳಿ

ಬೆಂಗಳೂರು— ಕರ್ನಾಟಕದಲ್ಲಿ ಕಾದು ರೆ ಜೂಜು ವಜಾಮಾಡಲು ಕೇಳಿಕೆಯಾಕೆ, ರೇಸ್‌ಕೋರ್ಸ್‌ನಲ್ಲೂ ಪಿಕೆಟಿಂಗ್ ಶೀಘ್ರ ನೇರಕಾರ್ಯಾಚರಣೆ ಕೈಗೊಳ್ಳಲಾಗುವುದೆಂದು ಕನ್ನಡ ಚಳವಳಿಗಾರರ ನಾಯಕರು ಪತ್ರಿಕೆಯವರಿಗೆ ತಿಳಿಸಿದರು.

### ಬಹಿಷ್ಕಾರ

ಧಾರವಾಡ– ವಿಶ್ವವಿದ್ಯಾಲಯ ಮತ್ತು ಪಿ ಯು.ಸಿ. ಬೋರ್ಡುಗಳ ಪರೀಕ್ಷೆಗಳನ್ನು ಬಹಿಷ್ಕರಿಸಲು, ಮತ್ತು ಉತ್ತರ ಪುಸ್ತಕಗಳ ಪರಿಶೀಲನೆಯನ್ನು ಬಹಿಷ್ಕರಿಸಲೂ ವಿಶ್ವವಿದ್ಯಾಲಯ ಮತ್ತು ಕಾಲೇಜು ಉಪಾಧ್ಯಾಯರ ಸಂಘ ನಿರ್ಧರಿಸಿದೆ.

★

### ಗೋಹತ್ಯೆಗಾಗಿ ಬಂಧನ

ಮೈಸೂರು— ಪಿರಿಯಾಪಟ್ಟಣ ತಾಲ್ಲೂಕು ಬೆವಗಲ್‌ನಲ್ಲಿ ತನ್ನ ಮನೆಯಲ್ಲಿ ಹಸುವನ್ನು ಕೊಂದ ಆಪಾದನೆಗಾಗಿ ಪಾಷಾ ಜಾನ್ ದಸ್ತಗಿರಿ ಮಾಡಲ್ಪಟ್ಟನು.

### ಮಂತ್ರಿಮಂಡಲ

ಬೆಂಗಳೂರು— ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಬೊಂಬಾಯಿನಿಂದ ಇಲ್ಲಿಗೆ ಇವತ್ತು ಬರುವರೆಂದೂ, ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವವರ ಹೆಸರನ್ನು ಪ್ರಕಟಿಸಲಾಗುವುದೆಂದೂ, ಶ್ರೀ ಮಹಮದ್ದಾಲಿಯವರಿಗೆ ಸ್ಥಾನ ಸಿಕ್ಕುವಂತಿದೆಯೆಂದೂ ಗೊತ್ತಾಗಿದೆ.

★

### ಚಳವಳಿ ದೇಶಾದ್ಯಂತ ಹರಡೀತು

ಜಯಪುರ– ಪ್ರಧಾನಿ ಇಂದಿರಾರವರು ಭ್ರಷ್ಟಾಚಾರ, ಬೆಲೆ ಏರಿಕೆ, ವಿದ್ಯಾವಂತರಲ್ಲಿಯ ನಿರುದ್ಯೋಗವನ್ನು ಕ್ಷಿಪ್ರದಲ್ಲೇ ಪರಿಹರಿಸುವವರೆಗೆ ಜನಶಕ್ತಿ ಅತೃಪ್ತಿ ಹೊರಚಿದ್ದು, ಬೀಹಾರು ವಿದ್ಯಾರ್ಥಿಯ ಚಳುವಳಿಯು ದೇಶಾದ್ಯಂತ ಹರಡುವುದೆಂದೂ, ಜಯಪ್ರಕಾಶರು ಬದುಕಿರಲಿ ಅಥವಾ ಸತ್ತಿರಲಿ ಚಳವಳಿ ನಿಲ್ಲುವುದಿಲ್ಲವೆಂದೂ, ಜಯಪ್ರಕಾಶ ನಾರಾಯಣರು ಸರ್ವೋದಯ ಕಾರ್ಯಕರ್ತರ ಸಭೆಯಲ್ಲಿ ಹೇಳಿದರು.

★

### ಬೆಲೆ ಏರಿಕೆ

ನವದೆಹಲಿ— ಸೆಪ್ಟಂಬರ್‌ನಲ್ಲಿ ಬೆಲೆ 328.2 ಕ್ಕೆ ಹೆಚ್ಚಿದೆ.

★

### ನೋಟು ಚಲಾವಣೆ

ಬೊಂಬಾಯಿ– ಈ ವಾರದಲ್ಲಿ ನೋಟುಗಳ ಚಲಾವಣೆಯಲ್ಲಿ ರೂ 23.84 ಕೋಟಿ ಇಳಿದಿದೆ.

★

### ಕ್ರಿಕೆಟ್ ಪಂಥದ ಟಿಕೀಟುಗಳು

ಬೆಂಗಳೂರು— ಇಲ್ಲಿ ನವೆಂಬರ 22 ರಂದು ನಡೆಯುವ ಭಾರತ–ವೆಸ್ಟ್‌ಇಂಡೀಸ್ ಕ್ರಿಕೆಟ್ ಪಂಥಕ್ಕೆ ಈಗಾಗಲೆ 30000 ಕ್ಕೂ ಹೆಚ್ಚು ಟಿಕೀಟುಗಳ ಮಾರಾಟವಾಗಿದೆ.

ವುಡ್‌ಲಾಂಡ್ಸ್ 25 10 74 ರಿಂದ
ಅಮೋಘ 6 ನೇ ವಾರ
ಇಮ್ತಿಹಾನ್ Imtihan

ಅಪೆರಾ 25 10 74 ರಿಂದ
ಟಿ. ಆರ್. ರಾಜಕುಮಾರಿ, ರಂಜನ್, ಎಸ್ ಎಸ್. ಕೃಷ್ಣನ್,
ಟಿ. ಎ. ಮಧುರಂ ಅಭಿನಯಿಸಿರುವ ಅಮೋಘ ತಮಿಳು ಚಿತ್ರ
ಚಂದ್ರಲೇಖ

Edited Printed and Published by Dharmapracharanirata M S. Krishna Rao ( Proprietor ) at the Satyavadi Press, Chamaraja puram Mysore

# ಮೈಸೂರು ನಗರ ಪೌರಸಭೆಯ

# ಗೃಹ ಯೋಜನೆ

ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದವರಿಂದ ಹಿಡಿದು ಅಧಿಕ ಆದಾಯ ಗುಂಪಿನವರ ವರೆಗೆ ಎಲ್ಲ ವರ್ಗದವರಿಗೂ ಮನೆಯನ್ನು ಹೊಂದಲು ನವ ದೆಹಲಿಯ ಹುಡ್ಕೋ ಸಂಸ್ಥೆಯ ಆರ್ಥಿಕ ಸಹಾಯದಿಂದ ಅಪೂರ್ವ ಅವಕಾಶವನ್ನು ಮಾಡಿಕೊಡುತ್ತಿದೆ.

ಸ್ಥಳ :—

(1) ಬನ್ನಿಮಂಟಪ (ಸುಮಾರು 1948 ಮನೆಗಳು ಮತ್ತು 327 ನಿವೇಶನಗಳು).

(2) ರೇಷ್ಮೆ ಕಾರ್ಖಾನೆ ಮುಂಭಾಗ (ಸುಮಾರು 983 ಮನೆಗಳು).

(3) ಕೈಲಾಸಪುರಂ (ಸುಮಾರು 218 ಮನೆಗಳು).

| ಮನೆಗಳ ಯೋಜನೆಯ ನಮೂನೆ | ಪ್ಲಿಂತ್ ವಿಸ್ತೀರ್ಣ | ಅಂದಾಜು ಬೆಲೆ | ಎಲ್ಲ ನಾಲ್ಕು ಹಂತಗಳಲ್ಲೂ ಉದ್ದೇಶಿಸಲಾದ ಮನೆಗಳ ಸಂಖ್ಯೆ | ಪ್ರಥಮ ಹಂತದಲ್ಲಿನ ಉದ್ದೇಶಿತ ಮನೆಗಳ ಸಂಖ್ಯೆ | ಅರ್ಜಿ ಶುಲ್ಕ ಬೆಲೆ | ಇ. ಎಂ. ಡಿ. |
|---|---|---|---|---|---|---|
| 1. ಮಂಗಳೂರು ಹೆಂಚಿನ ಛಾವಣಿಯುಳ್ಳ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಸಾಲು ಮನೆಗಳು | 3.23 ಚದುರಗಳು | ರೂ. 8000 | 832 | 390 | ರೂ. 3 | ರೂ. 50 |
| 2. — ಡಿಟೋ — ಅನೇಕ ಅಂತಸ್ತುಗಳ ಕಟ್ಟಡದಲ್ಲಿ ಆರ್ ಸಿ ಸಿ ಫ್ಲಾಟ್‌ಗಳು | 3.39 ಚಪ್ಪಡಿಗಳು | 11000 | 1269 | .... | 3 | 50 |
| 3. ಮಹಡಿ ಇರುವ ಕಟ್ಟಡದಲ್ಲಿ ಅಲ್ಪ ಆದಾಯದ ಗುಂಪಿನವರಿಗಾಗಿ ಆರ್ ಸಿ ಸಿ ಫ್ಲಾಟ್‌ಗಳು | 4.75 ಚಪ್ಪರಗಳು | 18000 | 180 | 36 | 5 | 100 |
| 4 ಮಧ್ಯಮ ವರ್ಗದ ಆದಾಯದ ಗುಂಪು | | | | | | |
| (ಎ) ಮಹಡಿಯಿರುವ ಕಟ್ಟಡದಲ್ಲಿ ಆರ್ ಸಿ ಸಿ ಫ್ಲಾಟ್‌ಗಳು | 8 50 ಚದುರಗಳು | 39200 | 80 | 72 | 10 | 500 |
| (ಬಿ) ಸ್ವತಂತ್ರ ಮನೆ | 8.50 ಚದುರಗಳು | 47800 | 11 | .... | 10 | 500 |
| 5. ಅಧಿಕ ಆದಾಯದವರ ಗುಂಪು | | | | | | |
| (ಎ) ಮಹಡಿಯಿರುವ ಕಟ್ಟಡದಲ್ಲಿ ಆರ್ ಸಿ ಸಿ ಫ್ಲಾಟ್‌ಗಳು | 11.50 ಚದುರಗಳು | 48500 | 60 | 36 | 15 | 500 |
| (ಬಿ) ಸ್ವತಂತ್ರ ಮನೆ | 11.50 ಚದುರಗಳು | 56000 | 11 | .... | 15 | 500 |
| 6 ನಿವೇಶನಗಳು | | | 327 | 95 | 5 | 100 |

ಸೂಚನೆ :—

1. ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮತ್ತೆ ಅರ್ಜಿ ಸಲ್ಲಿಸಬೇಕಾಗಿಲ್ಲ. ಮಧ್ಯಸ್ಥಿಕೆಯಿಂದ ಬನ್ನಿಮಂಟಪಕ್ಕೆ ಸ್ಥಳ ಬದಲಾವಣೆಗಾಗಿ ತಮ್ಮ ಒಪ್ಪಿಗೆಯನ್ನು 31-10-1974 ರ ಒಳಗೆ ಅವರು ಕೊಡಬೇಕೆಂದು ಕೋರಲಾಗಿದೆ.
2. ಮೈಸೂರಿನಲ್ಲಿರುವ, ಮೈಸೂರು ನಗರ ಪುರಸಭೆಯ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಸ್ಪೆಕ್ಟಸ್ ಸಮೇತ ಅರ್ಜಿಗಳನ್ನು ಕೆಲಸದ ಎಲ್ಲ ದಿನಗಳಲ್ಲೂ ಪಡೆಯಬಹುದು.
3. ಹೆಚ್ಚು ವಿವರಗಳಿಗೆ ಪೌರಸಭೆ ಎಕ್ಸಿಕ್ಯುಟೀವ್ ಇಂಜಿನಿಯರ್, ನಗರ ಪೌರಸಭೆ, ಮೈಸೂರು ಇವರಲ್ಲಿ ವಿಚಾರಿಸಿ.
4. ಅರ್ಜಿಗಳನ್ನು ಸ್ವೀಕರಿಸಲು ಕಡೆಯ ತಾರೀಖು 31-10-1974.

ಸಹಿ/— ಪೌರಸಭೆ ಎಕ್ಸಿಕ್ಯುಟೀವ್ ಇಂಜಿನಿಯರ್

ಸಿ. ಎಂ. ಸಿ., ಮೈಸೂರು.